# **ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ**

# **ಬಳ್ಳಾರಿ**

## **ವಿಶೇಷ ಮೊಕದ್ದಮೆ ಸಂಖ್ಯೆಃ991/2021**

**ಪಿ.ಡಬ್ಲ್ಯೂಃ 5 (ಸಿಡಬ್ಲ್ಯೂಃ 8)**

| | | |
|---|---|---|
| **ಸಾಕ್ಷಿದಾರರ ಹೆಸರು** | **:** | **ಶ್ರೀ ಮಚ್ಚಾಲಪ್ಪ** |
| **ತಂದೆಯ ಹೆಸರು** | **:** | **ರುದ್ರಪ್ಪ** |
| **ವಯಸ್ಸು** | **:** | **42 ವರ್ಷ** |
| **ಕೆಲಸ** | **:** | **ಸೂಪರ್ಇಂಟೆಂಡೆಂಟ್ ತಾಲೂಕು ಕಚೇರಿ** |
| **ವಾಸ ಸ್ಥಳ** | **:** | **ಬಳ್ಳಾರಿ** |

**ಸಾಕ್ಷಿಯನ್ನು ದಿನಾಂಕ 08.04.2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು 2015 ಏಪ್ರಿಲ್ ನಿಂದ ನಾನು ತಾಲೂಕು ಕಚೇರಿ ಬಳ್ಳಾರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಚಾಸಾ.9 ಮಲ್ಲಿಕಾರ್ಜುನ ತಾಲೂಕು ಪಂಚಾಯ್ತಿಯಲ್ಲಿ ಕೆಲಸ ಮಾಡುತ್ತಾರೆ.

**2.** ದಿಃ22.11.2019 ರಂದು ನಾನು ಮತ್ತು ಮಲ್ಲಿಕಾರ್ಜುನ ರವರು ನಮ್ಮ ಮೇಲಾಧಿಕಾರಿಯವರ ಆದೇಶದ ಮೇರೆಗೆ ಎಸಿಬಿ ಕಚೇರಿಗೆ ಮಃ 2.30 ಗಂಟೆಗೆ ಹೋಗಿರುತ್ತೇವೆ. ಠಾಣೆಯಲ್ಲಿ ಇನ್ಸಪೆಕ್ಟರ್ ಇದ್ದು, ಅಲ್ಲಿ ಇದ್ದ ವ್ಯಕ್ತಿಯನ್ನು ಪರಿಚಯಿಸಿ ಆತನ ಹೆಸರು ಸತ್ಯನಾರಾಯಣ ಆತ ದೂರು ಕೊಟ್ಟಿದ್ದಾನೆ , ಆದ್ದರಿಂದ ಪಂಚನಾಮೆ ಮಾಡಬೇಕಾಗಿದೆ ನೀವು ಪಂಚರಾಗಿ ಸಹಕರಿಸಬೇಕು ಎಂದು ಹೇಳಿದರು.

**Spl.C.No.**
**P.W. 5 (C.W.8)**
**Date : 08.04.2025**

**3**. ನಾನು , ಮಲ್ಲಿಕಾರ್ಜುನ , ಫಿರ್ಯಾದಿದಾರ ಮತ್ತು ಇನ್ಸಪೆಕ್ಟರ್ ಎಲ್ಲರೂ ಸೇರಿಕೊಂಡು ಸರ್ಕಾರಿ ವಾಹನದಲ್ಲಿ ಯಂಕಾರೆಡ್ಡಿ ಕ್ಯಾಂಪ್ ಗೆ ಹೋದೆವು. ಸತ್ಯನಾರಾಯಣ ರವರು ಹೇಳಿದ ಸ್ಥಳದಲ್ಲಿ ನಾವು ವಾಹನವನ್ನು ನಿಲ್ಲಿಸಿದ್ದು ಅಲ್ಲಿ 100 ಕೆವಿ ಟಿಸಿ ಇತ್ತು ಮತ್ತು ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಿದ್ದಾರೆ. ಸದರಿ ಪಂಚನಾಮೆಯನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ.12 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ.12(ಬಿ)** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋ ಗುರುತಿಸುತ್ತೇನೆ. ಅದನ್ನು ನಿಪಿ.13 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಶ್ರೀ ಯುಬಿ ಆರ್ಃ ವಕೀಲರು ಆರೋಪಿಯ ಪರಃ</u>**

**4.** ಲೋಕಾಯುಕ್ತ ಪೊಲೀಸರ ಕೋರಿಕೆಯ ಮೇರೆಗೆ ನಾನು ಮತ್ತು ಮಲ್ಲಿಕಾರ್ಜುನ ಪಂಚನಾಮೆಗೆ ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಮರು-ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

**<u>ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**